**2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ**
**ಕನಕಪುರ, ಬೆಂಗಳೂರು ದಕ್ಷಿಣ ಜಿಲ್ಲೆ .**
**ಎಸ್.ಸಿ.5033/2024**

| | |
|---|---|
| ಫಿರ್ಯಾದಿ | ಕರ್ನಾಟಕ ಅರಣ್ಯ ಇಲಾಖೆ, ಕನಕಪುರ |
| --ವಿರುದ್ಧ-- | |
| ಆರೋಪಿ | 1. ಚಿಕ್ಕತಿಮ್ಮ<br>2. ರಾಮಕೃಷ್ಣ |

**ದೋಷಾರೋಪಣೆ**

ಶ್ರೀ ಕುಮಾರ್.ಹೆಚ್.ಎನ್., ಬಿ.ಎ.ಎಲ್., ಎಲ್ಎಲ್.ಬಿ., 2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ದಕ್ಷಿಣ ಜಿಲ್ಲೆ, ಕನಕಪುರದಲ್ಲಿ, ಆದ ನಾನು

| | | |
|---|---|---|
| ಆರೋಪಿ | 1 | ಚಿಕ್ಕತಿಮ್ಮ<br>ಬಿನ್ ವೆಂಕಟೇಶ್,<br>ವಯಸ್ಸು 23 ವರ್ಷ,<br>ವಾಸಃ-<br>ಗೊಲ್ಲರದೊಡ್ಡಿ ಗ್ರಾಮ,<br>ಮರಳವಾಡಿ ಹೋಬಳಿ,<br>ಹಾರೋಹಳ್ಳಿ ತಾಲ್ಲೂಕು,<br>ಬೆಂಗಳೂರು ದಕ್ಷಿಣ ಜಿಲ್ಲೆ. |
| | 2 | ರಾಮಕೃಷ್ಣ<br>ಬಿನ್ ವೆಂಕಟೇಶ್,<br>ವಯಸ್ಸು 18 ವರ್ಷ,<br>ವಾಸಃ-<br>ಗೊಲ್ಲರದೊಡ್ಡಿ ಗ್ರಾಮ,<br>ಮರಳವಾಡಿ ಹೋಬಳಿ,<br>ಹಾರೋಹಳ್ಳಿ ತಾಲ್ಲೂಕು,<br>ಬೆಂಗಳೂರು ದಕ್ಷಿಣ ಜಿಲ್ಲೆ. |

ಆದ ನಿಮ್ಮ ವಿರುದ್ಧ ಮಾಡುವ ದೋಷಾರೋಪಣೆ ಏನೆಂದರೆ,

ದಿ:13.10.2018ರಂದು ಮಧ್ಯಾಹ್ನ ಸಮಯದಲ್ಲಿ ಹಾರೋಹಳ್ಳಿ ಶಾಖೆ, ಉಪವಲಯ ಅರಣ್ಯಾಧಿಕಾರಿ(ಪ್ರಭಾರ) ಹಾಗೂ ಸಿಬ್ಬಂದಿಯವರು ಮರಳವಾಡಿ ಟೌನ್ ಬೀಟಿನ ವ್ಯಾಪ್ತಿಯಲ್ಲಿ ಗಸ್ತು ತಿರುಗುತ್ತಿರುವಾಗ ನೀವು ಆರೋಪಿ-1 ಮತ್ತು 2ರವರು ಸೇರಿಕೊಂಡು ಮರಳವಾಡಿ ಗ್ರಾಮದ ಪಕ್ಕದಲ್ಲಿರುವ ಗುಡ್ಡದಲ್ಲಿ 3.5 ಕೆ.ಜಿ. ತೂಕದ ಶ್ರೀಗಂಧದ ಮರವನ್ನು ಅರಣ್ಯ ಇಲಾಖೆಯಿಂದ ಯಾವುದೇ ಪರವಾನಗಿ ಪಡೆಯದೇ ಕೊಯ್ದು ತುಂಡುಗಳನ್ನಾಗಿ ಮಾಡಿ ಮಾರಾಟ ಮಾಡುವ ಉದ್ದೇಶದಿಂದ ಸಾಗಾಣಿಕೆ ಮಾಡಲು ಪ್ರಯತ್ನಿಸಿರುವುದು ಕಂಡುಬಂದಿದ್ದು, ಈ ಮೂಲಕ ನೀವು ಆರೋಪಿ-1 ಮತ್ತು 2ರವರು ಕರ್ನಾಟಕ ಅರಣ್ಯ ಕಾಯ್ದೆ ಕಲಂ 50, 84, 86, 87(1), (2)ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯತೆಯೊಳಗೆ ಎಸಗಿರುತ್ತೀರಿ ಎನ್ನುವುದಾಗಿದೆ.

ನಾನು ಈ ಮೂಲಕ ಸದರಿ ಆರೋಪಣೆಗಾಗಿ ನಿಮ್ಮನ್ನು ವಿಚಾರಣೆಗೆ ಒಳಪಡಲು ನಿರ್ದೇಶಿಸುತ್ತೇನೆ.

**(ಕುಮಾರ್ ಹೆಚ್.ಎನ್)**
**2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಕನಕಪುರ, ಬೆಂಗಳೂರು ದಕ್ಷಿಣ ಜಿಲ್ಲೆ.**

ದಿ:**10.09.2025.**